"ಸರಿ... ನೀನು ಹೋಗು. ಬೀರ ಬಂದಾಗ ವಿಚಾರಿಸ್ತೀನಿ. ಅವನು ಕುಡಿದು ಏನಂದ್ನೋ ನೀನು ಏನು ಕೇಳಿಸ್ಕೊಂಡ್ಯೋ... ಈ ಸುದ್ದಿ ಮಾತ್ರ ಯಾರಿಗೂ ಹೇಳ್ಬೇಡ. ಮರ್ಯಾದೆ ಹೋಗುತ್ತೆ ಮಾರಾಯ" ಎಂದು ಗೌಡರು ಅಂದರು. ಗೌಡರು ಬೀರನ ಮೇಲೆ ಸಿಟ್ಟು ಮಾಡಿ ಕೂಗುತ್ತಾರೆ ಎಂದು ಭಾವಿಸಿದ್ದ ಸೋಮಣ್ಣನಿಗೆ ಅವರು ತಣ್ಣಗೆ ಏನೋ ಯೋಚಿಸಿದ್ದು ನೋಡಿ ಹಾಗಾದರೆ ಬೀರ ಹೇಳಿದ್ದು ಸತ್ಯ ಇರಬಹುದೇ ಎಂಬ ಅನುಮಾನ ಹುಟ್ಟಿತು. ದೊಡ್ಡವರ ಸಹವಾಸವೇ ಬೇಡ ಎಂದು ಯೋಚಿಸಿ ಬರ್ತೀನಿ ಗೌಡ್ರೇ ಎಂದು ಹೇಳಿ ತನ್ನ ಸೈಕಲ್ಲೇರಿದ. ಬಿಸಿಲು ಗೌಡರ ಮೈಸುಡುತ್ತಿತ್ತು.

★★★

ಬೀರನ ಮನೆಯ ಬಾಗಿಲು ಹಾಕಿತ್ತು. ಸಣ್ಣ ಕಿಟಕಿಯಿಂದ ಕಷ್ಟಪಟ್ಟು ಒಳಗೆ ಹೋಗಿ ನೋಡುವುದಾದರೂ ಏನನ್ನು ಎಂದೋ ಏನೋ ಮನೆಯ ಒಳಗೆ ಬೆಳಕು ಬರದೆ ಕತ್ತಲು ಸುಖವಾಗಿ ರಾಜ್ಯಭಾರ ನಡೆಸುತ್ತಿತ್ತು. ಬೀರನಿಗೆ ಎಚ್ಚರವಾಗಿ ಬಾಗಿಲು ತೆರೆದ. ಒಳ ನುಗ್ಗಿದ ಬೆಳಕಲ್ಲಿ ಈರಿ ಮತ್ತು ಪುಟ್ಟ ಇಬ್ಬರೂ ಕಾಣಲಿಲ್ಲ. ಎದ್ದು ಒಲೆಯತ್ತ ಇಣುಕಿದರೆ ಅದರಲ್ಲಿ ಬೆಂಕಿ ಹಾಕಿದ ಸೂಚನೆಯೂ ಕಾಣಲಿಲ್ಲ. ಈ ರಂಡೆ ಎಲ್ಲಿ ಹೋದಳು ತಿಂಡಿ ಕೂಡ ಮಾಡದೆ ಎಂದು ಗೊಣಗುತ್ತಾ ಹೊರಬಂದ.

ಮನೆಯ ಹೊರಬಂದು ಎಡಕ್ಕೆ ತಿರುಗಿ ಹತ್ತು ಹೆಜ್ಜೆ ನಡೆದರೆ ಜೋಗಕ್ಕೆ ಹೋಗುವ ಮುಖ್ಯ ರಸ್ತೆ. ರಸ್ತೆ ಆ ಬದಿ ಗೋವಿಂದನ ಅಂಗಡಿ. ಬೀರ ಮನೆಯ ಹೊರಗೆ ಬಂದು ನೋಡುತ್ತಾನೆ ಸೂರ್ಯ ಕಣ್ಣಿನ ನೇರಕ್ಕಿರುವ ಬದಲು ತುಸು ಮೇಲೆ ಹೋಗಿಬಿಟ್ಟಿದ್ದಾನೆ. ದಿನಕ್ಕಿಂತ ಇವತ್ತು ಬೇಗ ಬೆಳಗಾಯಿತೇ ಎಂದು ಅನುಮಾನ ಪಡುತ್ತಾ, ಗೌಡ್ರ ಹತ್ತಿರ ಸಮಾ ಬೈಸಿಕೊಳ್ಳಲು ಸಿದ್ಧನಾಗುತ್ತಿರುವಾಗಲೇ, "ಏ ಬೀರ, ಇಲ್ಲಿ ಬಾ" ಎಂಬ ಗೋವಿಂದನ ಕೂಗು ಕೇಳಿದ್ದು.

ತಿಂಗಳ ಹಿಂದೆ ಗೋವಿಂದನಿಂದ ಬೀರ ನಾಳೆ ಮನೆಯ ಹಿತ್ತಲು ಸವರಿಕೊಡುತ್ತೇನೆ ಎಂದು ಹೇಳಿ ನೂರು ರೂಪಾಯಿ ತೆಗೆದುಕೊಂಡಿದ್ದ. ಹಿತ್ತಲು ಸವರಲು ಅವನಿಗೆ ಆಗಿರಲೇ ಇಲ್ಲ. ಈಗ ಅದನ್ನೇ ಹಿಡಿದು ಬೈಯುತ್ತಾರೆ ಎಂದು ಯೋಚಿಸಿ, ಹಾಗೆ ಬೈದರೆ ಅವರ ನೂರು ರೂಪಾಯಿ ಮುಖದ ಮೇಲೆ ಬಿಸಾಕಿದರಾಯಿತು, ಹ್ಯಾಗೂ ಉಂಟಲ್ಲ ಎಂದು ಜೇಬಿಗೆ ಕೈಹಾಕಿದರೆ ಅಲ್ಲೇನಿದೆ? ಇರುವ ಎರಡು ಜೇಬನ್ನು ನಾಲ್ಕು ಬಾರಿ ತಡಕಾಡಿದರೂ ಖಾಲಿ. ಮಲಗಿದ ಜಾಗದಲ್ಲೇ ಬಿತ್ತಾ? ಅಥವಾ ನಿನ್ನೆ ಸೋಮಣ್ಣನ ಅಂಗಡಿಯಲ್ಲೇ ಬಿಟ್ಟೆನಾ? ಎಂದು ಯೋಚಿಸುತ್ತಾ ನಿಂತೇ ಇದ್ದ. "ಏಯ್, ಕಿವಿ ಕೇಳ್ತಿಲ್ವಾ?" ಎಂಬ ಗೋವಿಂದನ ಕೂಗು ಜೋರಾಗಿಯೇ ಅಪ್ಪಳಿಸಿತು. ಕಾಲು ಎಳೆಯುತ್ತಾ ಹೋದ.

ಆದರೆ, ನೂರು ರೂಪಾಯಿ ಸುದ್ದಿ ಎತ್ತಿ ಬೈಬಹುದು ಎಂಬ ಅವನ ನಿರೀಕ್ಷೆ ಹುಸಿಯಾಯಿತು.

"ನಿನ್ನ ಮಗ ಪುಟ್ಟ ನಿನ್ನೆ ಸಾಯಂಕಾಲ... ಓ ಅಲ್ಲಿ ಮೂಲೇಲಿ ಇಟ್ಟ ಗೊನೆಯಿಂದ ನಾಲ್ಕು ಬಾಳೆಹಣ್ಣು ಕದ್ದಿದಾನೆ. ಅದರ ಬಾಬ್ತು ದುಡ್ಡು ತೆಗಿ" ಎಂದು ಗೋವಿಂದ ಅಂದ.

ಮೂಲೆಯಲ್ಲಿ ಅರ್ಧಕ್ಕಿಂತ ಹೆಚ್ಚು ಕೊಳೆತಿದ್ದ ಬಾಳೆಯ ಗೊನೆ ಇತ್ತು. ನೋಡಿದರೆ ಅದನ್ನು ಯಾರಾದರೂ ಕದ್ದು ತಿನ್ನಬಹುದೇ ಹೊರತು ಖರೀದಿಸಿ ತಿನ್ನುವಂತಿರಲಿಲ್ಲ.

"ಅವನು ಕದ್ರೆ ನಾನೆಂತಾ ಮಾಡೋದು? ನೀವು ಸಮಾ ನಾಕು ಬಿಗೀಬೇಕಿತ್ತು."

"ನೋಡು ನಂಗದೆಲ್ಲ ಗೊತ್ತಿಲ್ಲ. ನೀನು ಆ ಗೊನೆ ದುಡ್ಡು ಕೊಟ್ರಾಯಿತು. ಇಲ್ದಿದ್ರೆ ಗೌಡ್ರಿಗೆ ನಿನ್ನ ಕೂಲೀಲಿ ಮುರ್ಕೊಂಡು ಕೊಡಿ ಅಂತೀನಿ."

ಈರಿ ಅಡಗಿಸಿಟ್ಟಿದ್ದ ದುಡ್ಡಲ್ಲಿ ಹೆಂಡ ಕುಡಿದ ಅನಂತರ ಉಳಿದ ದುಡ್ಡು ಎಲ್ಲಿ ಹೋಯಿತು ಎಂಬ ಚಿಂತೆಯಲ್ಲಿದ್ದ ಬೀರನಿಗೆ ಈ ಹೊಸಾ ಸಮಸ್ಯೆ ಹುಟ್ಟಿ, "ಎಂತಾರೂ ಮಾಡ್ಕೊಳ್ಳಿ. ಅವ ಕದ್ರೆ ಅವನ್ನೇ ಕೇಳಿ" ಅಂತ ಹೇಳಿ ದುಡ್ಡು ಚಾಪೆಯ ಮೇಲೆ ಬಿದ್ದಿದೆಯೇ ನೋಡಲು ಮತ್ತೆ ಮನೆಗೆ ಬಂದ. ಚಾಪೆಯ ಮೇಲೆ ಇರಲಿಲ್ಲ. ಹಸಿದ ಹೊಟ್ಟೆ ಕೂಗುತ್ತಿತ್ತು. ಬೀರ ಹಾಗಿದ್ದರೆ ದುಡ್ಡು ಎಲ್ಲಿ